ಬೇರೆ ಬೇರೆ ಕಡೆ ಕೋ-ಜನರೇಷನ್ ಮುಂತಾದವುಗಳನ್ನು ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ಮಾಡಿದ್ದೇವೋ ಅದೇ ರೀತಿ ಇದರ ಬಗ್ಗೆ ಸಹ ತೀರ್ಮಾನ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಅದರಂತೆ ರಾಯಬಾಗ್ ಸಕ್ಕರೆ ಕಾರ್ಖಾನೆಯ ಬಗ್ಗೆ ಸಹ ಕ್ರಮ ತೆಗೆದುಕೊಳ್ಳೋಣ. ಆದ್ದರಿಂದ ಈ ಚರ್ಚೆಯನ್ನು ಇಲ್ಲಿಗೆ ನಿಲ್ಲಿಸಿ ಮುಂದಿನ ವಿಷಯಕ್ಕೆ ದಯಮಾಡಿ ಹೋಗಿ.

ಒಬ್ಬ ಮಾನ್ಯ ಸದಸ್ಯರು: ಸಕ್ಕರೆ ಕಾರ್ಖಾನೆಗಳ ಅಧ್ಯಕ್ಷರೊಂದಿಗೆ ಮಾತನಾಡಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾತನಾಡಿದ್ದೇವೆ. ನಾನೇ ಹೋಗಿದ್ದೆ ಮುಖ್ಯಮಂತ್ರಿಗಳು ಹೋಗಿದ್ದಾರೆ. ನಾವು ಭೇಟಿ ಮಾಡಲೇ ಇಲ್ಲ. ನಮಗೆ ಕಳಕಳಿಯೇ ಇಲ್ಲ ಎಂಬ ಭಾವನೆ ಆ ಭಾಗದವರಿಗೇಕಿದೆ? ಮೊನ್ನೆ ರಾತ್ರಿ ನಾನು ಹೋಗಿ ಭೇಟಿ ಮಾಡಿ ಬಂದಿದ್ದೇನೆ. ಮುಖ್ಯಮಂತ್ರಿಗಳು ಚರ್ಚೆ ಮಾಡಿದ್ದಾರೆ. ಭರವಸೆ ಕೊಟ್ಟಿದ್ದಾರೆ. ಮಾತನಾಡುತ್ತೇವೆ. ಈ ಸಮಸ್ಯೆಯನ್ನು ಬಗೆಹರಿಸೋಣ. ನಾವೆಲ್ಲರೂ ರೈತರು ಮಕ್ಕಳಿದ್ದೇವೆ. ರೈತರ ಪರವಾದ ಸರ್ಕಾರ ಇಲ್ಲಿದೆಯೆಂದರೆ ನಾನು ಹೇಳಿದ್ದೇನೆ. ಹಿಂದೆ ಏನಾಗಿತ್ತು ಎಂಬ ಪ್ರಶ್ನೆ ಬೇಡ. ಮುಂದೆ ಏನು ಮಾಡಬೇಕೋ ಅದರ ಬಗ್ಗೆ ನಾವು ಬದ್ಧರಿದ್ದೇವೆ. ಮಾತನಾಡುತ್ತೇವೆ.

3. ಪ್ರಕಟಣೆ

ಉಪಾಧ್ಯಕ್ಷರು: ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಬಂದಿರುವ ಸಂದೇಶದಲ್ಲಿ 'ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 118ರ ಮೇರೆಗೆ ವಿಧಾನ ಪರಿಷತ್ತು 2006ನೇ ಸಾಲಿನ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು (ಸಂಖ್ಯೆ 4) ವಿಧೇಯಕವನ್ನು ಈ ದಿನ ದಿನಾಂಕ 27ನೇ ಸೆಪ್ಟೆಂಬರ್ 2006ರಂದು ಯಾವುದೇ ತಿದ್ದುಪಡಿ ಇಲ್ಲದೆ ಅನುಮೋದಿಸಲಾಗಿದೆಯೆಂದು ತಿಳಿಸಿರುತ್ತಾರೆ.

ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಬಂದಿರುವ ಸಂದೇಶದಲ್ಲಿ ಕರ್ನಾಟಕ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 118ರ ಮೇರೆಗೆ ವಿಧಾನಪರಿಷತ್ತು 2005ನೇ ಸಾಲಿನ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ವಿಧೇಯಕವನ್ನು ಈ ದಿನ ದಿನಾಂಕ 28ನೇ ಸೆಪ್ಟೆಂಬರ್ 2006ರಂದು ಯಾವುದೇ ತಿದ್ದುಪಡಿ ಇಲ್ಲದೆ ಅನುಮೋದಿಸಲಾಗಿದೆಯೆಂದು ತಿಳಿಸಿರುತ್ತಾರೆ.